# ಬುಗ್ಗೆಯ ನೀರು



ಇದೊಂದು ಬಹಳ ಹಿಂದಿನ ಕಾಲದಲ್ಲಿ ನಡೆದ ಕತೆ. ಒಬ್ಬ ಸೌದೆ ಒಡೆದು ಮಾರುವ ಮುದುಕ, ಸೌದೆ ಶೇಖರಿಸಲು ಕಾಡಿಗೆ ಹೋದ. ಸೌದೆ ಒಡೆದು ಒಡೆದು, ಬಹಳವಾಗಿ ದಣಿದುಹೋದ ಮುದುಕ ಒಂದು ಮರದ ನೆರಳಲ್ಲಿ ವಿಶ್ರಮಿಸಲು ಕುಳಿತ. ತನ್ನ ಜೀವನದಲ್ಲಿ ಕಳೆದುಹೋದ ದಿನಗಳನ್ನು ಕುರಿತು ಚಿಂತಿಸತೊಡಗಿದ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಏನೋ, ನೀರು ಜುಳು ಜುಳು ಶಬ್ದಮಾಡುತ್ತಾ ಹರಿದು ಬೀಳುತ್ತಿರುವ ಮಧುರವಾದ ಶಬ್ದ ಅವನಿಗೆ ಕೇಳಿಸಿತು. 'ಹತ್ತಿರದಲ್ಲಿ ಎಲ್ಲಾದರೂ ನೀರಿನ ಬುಗ್ಗೆ ಇದೆಯೆ?' ಎಂದು ಆಲೋಚಿಸಿದ. ಆ ನೀರು ಬೀಳುತ್ತಿರುವ ಶಬ್ದ ಕೇಳಿಸಿಕೊಂಡೇ ಅವನ ಮನಸ್ಸಿಗೆ ತಂಪಿನ ಅನುಭವವಾಯಿತು, ಶಾಂತವಾಯಿತು. ಅವನು ಮೆಲ್ಲಗೆ ಮೇಲೆದ್ದು, ಅತ್ತ ಇತ್ತ ಸ್ವಲ್ಪ ಹುಡುಕಾಟ ನಡೆಸುತ್ತಲೇ ಕಾಡಿನಲ್ಲಿ ಒಂದು ಕಡೆ ನೀರಿನ ಬುಗ್ಗೆ ಇರುವುದನ್ನು ಕಂಡ! ನೀರು ಕಂಡದ್ದೆ ಅವನಿಗೆ ವಿಪರೀತವಾದ ಬಾಯಾರಿಕೆಯ ಅನುಭವ ಆಯಿತು. ಬುಗ್ಗೆಯಿಂದ ಹರಿದು ಬರುತ್ತಿದ್ದ ನೀರನ್ನು ತೃಪ್ತಿಯಾಗುವವರೆಗೆ ಕುಡಿದ. ನೀರು ಕುಡಿದದ್ದೇ ತಡ, ಒಂದು ಅದ್ಭುತ ಘಟಿಸಿತು! ಏನು ಆಶ್ಚರ್ಯ!! ಅವನ ಸುಕ್ಕುಗಟ್ಟಿದ್ದ ಚರ್ಮ, ವಯಸ್ಸಾದ ದೇಹ ಯೌವನ ತುಂಬಿಕೊಂಡು ಕಂಗೊಳಿಸಿತು! ಅವನು ತನ್ನ ಕಳೆದುಹೋಗಿದ್ದ ಯೌವನವನ್ನು ಮತ್ತೆ ಪಡೆದಿದ್ದ! ತನ್ನಲ್ಲಾದ ಮಾರ್ಪಾಡಿನಿಂದಾಗಿ ಅವನು ಬಹಳವಾಗಿ ಆನಂದಿಸಿದ. ಓಡೋಡುತ್ತಲೇ ಮನೆಗೆ ಬಂದ. ಅವನ ಮುದಿ ಹೆಂಡತಿ ಅವನನ್ನು ನೋಡಿ ಅವಾಕ್ಕಾಗಿಹೋದಳು. ಬುಗ್ಗೆಯ ನೀರಿನಲ್ಲಿ ಈ ರೀತಿಯ ಅಸಾಧಾರಣ ಶಕ್ತಿ ಇದೆ ಎನ್ನುವುದನ್ನು ಕೇಳಿದ ಮುದುಕಿ, ಯೌವನ ಬಯಸಿ ತಾನೂ ಕಾಡಿನತ್ತ ನಡೆದಳು. ಬುಗ್ಗೆಯ ನೀರನ್ನು ಕುಡಿದ ಕೂಡಲೇ ಮುದುಕಿಯೂ ಸಹ ತನ್ನ ಹಿಂದಿನ ಯೌವನ ಮರಳಿ ಪಡೆದು ಆನಂದದಿಂದ ಪುಳಕಿತಳಾದಳು. ಇನ್ನು ಸ್ವಲ್ಪ ಎಳೆವಯಸ್ಸಿಗೆ ಹಿಂತಿರುಗುವ ಆಸೆಯಿಂದ ಅವಳು ಬುಗ್ಗೆಯ ನೀರನ್ನು ಮತ್ತೆ ಮತ್ತೆ ಕುಡಿಯತೊಡಗಿದಳು. ಎಷ್ಟು ಹೊತ್ತಾದರೂ ಹಿಂತಿರುಗಿ ಬಾರದ ಮುದುಕಿಯ ಬಗ್ಗೆ ಚಿಂತಿತನಾದ, ಸದ್ಯದಲ್ಲಿ ಯುವಕನಾಗಿದ್ದ ಮುದುಕ, ಹೆಂಡತಿಯನ್ನು ಹುಡುಕುತ್ತಾ ಕಾಡಿಗೆ ಹೊರಟ. ನೀರಿನ ಬುಗ್ಗೆಯ ಬಳಿಗೆ ಬಂದು ಅವಳನ್ನು ಕೂಗಿ ಕರೆದ. ಎಲ್ಲಿಯೂ ಮುದುಕಿಯ ಸುಳಿವೇ ಇಲ್ಲ! ನೀರಿನ ಸಮೀಪವೇ ಒಂದು ಪುಟ್ಟ ಮಗು ಮಲಗಿದೆ. 'ಕ್ಯಾವ್ ಕ್ಯಾವ್' ಎಂದು ಅಳುತ್ತಾ ಕಣ್ಣೀರು ಸುರಿಸುತ್ತಿದೆ. ಮುದುಕಿ ಮೂರ್ಖತನದ ಕೆಲಸ ಮಾಡಿದ್ದಾಳೆಂದು ಅವನಿಗೆ ಅರ್ಥವಾಯಿತು. ಅಧಿಕವಾಗಿ ನೀರು ಕುಡಿದ ಫಲ, ಮುದುಕಿ ಎಳೆಯ ಕೂಸಾಗಿ ಹೋಗಿದ್ದಳು. ಈಗ ಇನ್ನೇನೂ ಮಾಡುವಂತಿಲ್ಲ. ಮುದುಕ ಆ ಎಳೆಮಗುವಿನ ರೂಪದ ಮುದುಕಿಯನ್ನು ಎತ್ತಿ ಕೊಂಡು ಮನೆಗೆ ಬಂದ. ಮನೆಯಲ್ಲಿ ಅವಳನ್ನು ಪ್ರೀತಿವಾತ್ಸಲ್ಯಗಳಿಂದ ಪಾಲನೆ-ಪೋಷಣೆ ಮಾಡಿ ದೊಡ್ಡವಳನ್ನಾಗಿ ಮಾಡತೊಡಗಿದ. *



**ಬಂಗಾಳಿ ಮೂಲ : ರಾಜಕೃಷ್ಣ ಭಟ್ಟಾಚಾರ್ಯ**
**ಚಿತ್ರ : ಜುಂಕೋ ಭಟ್ಟಾಚಾರ್ಯ**
**ಕನ್ನಡಾನುವಾದ : ಗಿರಿಜಾದೇವಿ**



# ಸ್ವಾಮಿ ವಿವೇಕಾನಂದರು ನಿರೂಪಿಸಿದ

## ನೀತಿ ಕಥೆಗಳು

ಡಾ. ಕೆ. ಅನಂತರಾಮು

## ಮಹಾರಾಜನ ಮರಣಶಾಸನ

ದಕ್ಷಿಣಭಾರತದಲ್ಲಿ ಬಲಶಾಲಿಯಾದ ರಾಜಮನೆತನವೊಂದಿತ್ತು. ಆ ಮನೆತನಕ್ಕೆ ಸೇರಿದ ಪ್ರಮುಖ ವ್ಯಕ್ತಿಗಳ ಜಾತಕಗಳನ್ನು ಅವರು ಹುಟ್ಟಿದಂದೇ ಜೋತಿಷ್ಕರಿಂದ ಲೆಕ್ಕಹಾಕಿಸಿ ಬರೆಯಿಸಿಡುವ ಸಂಪ್ರದಾಯ ಅವರಲ್ಲಿ ರೂಢಿಯಲ್ಲಿತ್ತು. ಆ ಜಾತಕಗಳಲ್ಲಿ ಮುಂದೆ ನಡೆಯಬಹುದಾದ ಕೆಲವು ಪ್ರಮುಖ ಘಟನೆಗಳ ವಿವರಗಳೂ ಇರುತ್ತಿದ್ದವು. ತರುವಾಯದ ಕಾಲದಲ್ಲಿ ಆ ಮನೆತನದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಈ ಹಿಂದೆ ಜೋತಿಷ್ಕರು ಬರೆದಿಟ್ಟಿದ್ದ ಘಟನೆಗಳೊಂದಿಗೆ ಹೋಲಿಸಿ ನೋಡುತ್ತಿದ್ದರು. ಹೀಗೆ ಸಾವಿರಾರು ವರ್ಷಗಳು ತುಲನೆ ಮಾಡಿದ ಬಳಿಕ, ಕೆಲವು ಹೊಂದಾಣಿಕೆಗಳನ್ನು ಅವರು ಕಂಡುಕೊಂಡರು. ಅವುಗಳ ಆಧಾರದ ಮೇಲೆ, ಆ ಕಾಲದ ಜೋತಿಷ್ಕರು ಒಂದು ದೊಡ್ಡ ಗ್ರಂಥವನ್ನೇ ಬರೆದರು. ಪ್ರಬಲವಾಗಿದ್ದ ಆ ರಾಜವಂಶವು ಅಳಿದು ಹೋದರೂ, ಜ್ಯೋತಿಷ್ಕರ ವಂಶವು ಮಾತ್ರ ಮುಂದುವರೆಯಿತು. ಆ ಗ್ರಂಥವು ಅವರ ಸೊತ್ತಾಯಿತು. ಹೀಗೆ ಹೇಳುತ್ತಾ ವಿವೇಕಾನಂದರು ಆ ರಾಜಮನೆತನ ಯಾವುದು, ಆ ಗ್ರಂಥ ಯಾವುದು ಎಂಬುದನ್ನು ಪ್ರಸ್ತುತದಲ್ಲಿ ಹೇಳದಿದ್ದರೂ ಜ್ಯೋತಿಷ್ಯಶಾಸ್ತ್ರವು ಉಗಮಗೊಂಡ ಪರಿಯನ್ನು ತಮ್ಮದೇ ಆದ ಕಾಣ್ಕೆಯಿಂದ ಮೇಲಿನಂತೆ ವಿವರಿಸಿದ್ದಾರೆ. ಜೋತಿಷ್ಯದ ವಿವರಣೆಗಳಿಗೆಲ್ಲ ಅತಿಯಾದ ಗಮನಕೊಡುವುದು ಒಂದು ಮೂಢನಂಬಿಕೆ. ಅದು ಹಿಂದೂಗಳಿಗೆ ಹೆಚ್ಚಿನ ಹಾನಿಯನ್ನುಂಟುಮಾಡಿದೆ ಎಂಬುದಾಗಿಯೂ ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ. ಈ ಮೇಲಿನ ವಿಷಯಗಳನ್ನು ಮನನಮಾಡಲು ಅನುಕೂಲವಾಗುವಂತೆ 'ಜ್ಯೋತಿಷಿಯನ್ನು ಕುರಿತು ಒಂದು ಹಳೆಯ ಕಥೆ ಇದೆ'ಎನ್ನುತ್ತಾ ಅದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡಿದ್ದಾರೆ.

ಜ್ಯೋತಿಷಿಯೊಬ್ಬನು ಭವಿಷ್ಯವನ್ನು ಹೇಳುವುದರಲ್ಲಿ ತುಂಬಾ ನಿಷ್ಣಾತನಾಗಿದ್ದನು. ತನ್ನ ದೇಶಸಂಚಾರದ ಕಾಲದಲ್ಲಿ



ಕಲೆ : ಶ್ರೀಕಾಂತ ಆಚಾರ್ಯ